**ದಿನಾಂಕಃ 30-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಪಾಟೀ ಸವಾಲುಃ** 1 ನೇ ಎದುರುದಾರರ ಪರ ವಕೀಲರನ್ನು ಪದೇ-ಪದೇ ಕೂಗಿ ಕರೆಯಿಸಲಾಗಿ, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಪಿ ಎಸ್ ಹೆಚ್ ವಕೀಲರಿಂದಃ**

1. ಮೃತ ಶಾಂತಪ್ಪ ನನ್ನ ಗಂಡನಾಗಬೇಕು. ಅಪಘಾತ ಸಮಯದಲ್ಲಿ ನನ್ನ ಗಂಡನಿಗೆ 39 ವರ್ಷ ವಯಸ್ಸಾಗಿತ್ತು. ನನ್ನ ಗಂಡ ವ್ಯವಸಾಯ ಮಾಡುತ್ತಿದ್ದ. ನನ್ನ ಗಂಡನಿಗೆ ಪ್ರತಿ ತಿಂಗಳಿಗೆ ರೂ.30 ಸಾವಿರದಿಂದ 40 ಸಾವಿರ ಆದಾಯ ಇತ್ತು. ನನಗೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇರುತ್ತಾಳೆ. ಅರ್ಜಿದಾರರು ಮೃತ ಶಾಂತಪ್ಪನ ವಾರಸುದಾರರು ಎಂದು ತೋರಿಸಲು ವಾರ್ಸಾ ಸರ್ಟಿಫಿಕೇಟ್ ಹಾಜರು ಪಡಿಸಿರುವುದಿಲ್ಲ. ನಾನು ಮತ್ತು ಇತರೆ ಅರ್ಜಿದಾರರು ಮೃತ ಶಾಂತಪ್ಪ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ನನಗೆ ಅತ್ತೆ ಮಾವ ಇಲ್ಲ. ನನ್ನ ಮದುವೆಗಿಂತ ಮೊದಲೆ ಅವರು ತೀರಿಕೊಂಡಿರುತ್ತಾರೆ.

2. ಅಪಘಾತ ದಿಃ12-12-2020 ರಂದು ಆಗಿರುತ್ತದೆ. ನನ್ನ ಗಂಡ ದನಕರುಗಳನ್ನು ಮೇಯಿಸಿಕೊಂಡು ಬರುವಾಗ ಕಾರ್ ಬಂದು ಡಿಕ್ಕಿ ಪಡಿಸಿ, ಅಪಘಾತ ಆಗಿರುತ್ತದೆ. ಅಪಘಾತ ಆದ ತಕ್ಷಣ ನನಗೆ ವಿಚಾರ ಗೊತ್ತಾಗಿರುತ್ತದೆ. ಅಪಘಾತವಾದ ತಕ್ಷಣ ನನ್ನ ಗಂಡನನ್ನು ಹೊನ್ನಳಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತೇನೆ. ಹೊನ್ನಾಳಿ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲಿ ಆಗುವುದಿಲ್ಲ ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದರಿಂದ ನಾನು ನನ್ನ ಗಂಡನನ್ನು ಶಿವಮೊಗ್ಗ ಮ್ಯಾಕ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ 2-3 ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಅಪಘಾತದಲ್ಲಿ ನನ್ನ ಗಂಡನಿಗೆ ತಲೆಗೆ , ಕೈ ಕಾಲುಗಳಿಗೆ ಪೆಟ್ಟಾಗಿತ್ತು. ಆಸ್ಪತ್ರೆಯಲ್ಲಿ ತಲೆಗೆ ಆಪರೇಶನ್ ಮಾಡಿದರು. 3 ತಿಂಗಳು ಮ್ಯಾಕ್ಸ ಆಸ್ಪತ್ರೆ ಯಲ್ಲಿ ಚಿಕಿತ್ಸೆ ನೀಡಿ ಬಿಡುಗಡೆ ಮಾಡಿ 6 ತಿಂಗಳು ಬಿಟ್ಟು ಬನ್ನಿ ಎಂದು ಹೇಳಿದ್ದರು. ಆಸ್ಪತ್ರೆಯಿಂದ ಬಿಡುಗಡೆ ಆಗುವಾಗ ನನ್ನ ಗಂಡನಿಗೆ ಮೂಗಿನಲ್ಲಿ ಪೈಪ್ ಹಾಕಿ ಕಳುಹಿಸಿದ್ದರು. ಎಲ್ಲಾ ಆಹಾರವನ್ನು ಪೈಪ್ ಮೂಲಕವೆ ಕೊಡುತ್ತಿದ್ದೆವು. ಆ ಬಗ್ಗೆ ಡಿಸ್ಚಾರ್ಜ ಸಮರಿಯಲ್ಲಿ ಬರೆದಿರುತ್ತಾರೆ.

3. ಮ್ಯಾಕ್ಸ ಆಸ್ಪತ್ರೆಯಲ್ಲಿಯೆ 2 ವರ್ಷಗಳ ಕಾಲ ಫಾಲೋ ಅಪ್ ಚಿಕಿತ್ಸೆಯನ್ನು ಕೊಡಿಸಿರುತ್ತೇವೆ. ನಂತರ ನನ್ನ ಗಂಡನನ್ನು ಬೆಂಗಳೂರಿನ ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು

ಹೋಗಿರುತ್ತೇನೆ. ನಿಮಾನ್ಸ ಆಸ್ಪತ್ರೆಯಲ್ಲಿ ಒಂದು ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ನಿಮಾನ್ಸ ಆಸ್ಪತ್ರೆಯಲ್ಲಿ ತಲೆಯ ಚಿಪ್ಪು ತೆಗೆದು ಆಪರೇಶನ್ ಮಾಡಿ 3 ತಿಂಗಳು ಬಿಟ್ಟು ಬನ್ನಿ ಎಂದು ಕಳುಹಿಸಿದ್ದರು. 3 ತಿಂಗಳ ನಂತರ ಪುನಃ ನಿಮಾನ್ಸ ಆಸ್ಪತ್ರೆಗೆ ಹೋಗಿದ್ದು ಪರೀಕ್ಷೆ ಮಾಡಿ ಔಷಧಿಗಳನ್ನು ಕೊಟ್ಟು 6 ತಿಂಗಳು ಬಿಟ್ಟು ಬನ್ನಿ ಎಂದು ಹೇಳಿ ಕಳುಹಿಸಿರುತ್ತಾರೆ. ನನ್ನ ಗಂಡ ಮನೆಯಲ್ಲಿಯೇ ತೀರಿಕೊಂಡಿರುತ್ತಾರೆ. ಮರಣ ಹೊಂದಿದ ನಂತರ ಶವಪರೀಕ್ಷೆಯನ್ನು ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿರುತ್ತಾರೆ. ಸದರಿ ಶವ ಪರೀಕ್ಷಾ ವರದಿಯನ್ನು ಹಾಜರು ಪಡಿಸಿರುತ್ತೇನೆ. ಫಾಲೋ ಅಪ್ ಟ್ರೀಟ್ ಮೆಂಟ್ ಅವಧಿಯಲ್ಲಿ ನನ್ನ ಗಂಡ ಮಾತನಾಡುತ್ತಿರಲಿಲ್ಲ ಮೌನವಾಗಿ ಇರುತ್ತಿದ್ದರು.

4. ನನ್ನ ಗಂಡ ಮನೆಯಲ್ಲಿ ಇದ್ದಾಗ ಆತನನ್ನು ನೋಡಿಕೊಳ್ಳಲು ಒಬ್ಬ ಚಿಕ್ಕ ಸ್ವಾಮಿ ಎನ್ನುವವನನ್ನು ನೇಮಿಸಿಕೊಂಡಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಿಕ್ಕ ಸ್ವಾಮಿಗೆ ತಿಂಗಳಿಗೆ ರೂ.15 ಸಾವಿರ ಸಂಬಳ ಕೊಡುತ್ತಿದ್ದೆವು. ರೂ.15 ಸಾವಿರ ರೂಪಾಯಿ ಕೊಟ್ಟ ಬಗ್ಗೆ ಯಾವುದೆ ದಾಖಲೆ ಇರುವುದಿಲ್ಲ. ನನ್ನ ಗಂಡನ ಆಸ್ಪತ್ರೆಯ ಖರ್ಚು , ಓಡಾಟ , ಸಹಾಯಕರ ಖರ್ಚುಗಳಿಗೆ ಒಟ್ಟು ರೂ.20 ಲಕ್ಷ ಖರ್ಚಾಗಿರುತ್ತದೆ. ರೂ.20 ಲಕ್ಷ ಖರ್ಚಾಗಿದೆ ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿರುತ್ತೇನೆ. ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಅಂತಿಮ ಸಂಸ್ಕಾರಕ್ಕಾಗಿ ರೂ.2 ಲಕ್ಷ ಖರ್ಚಾಗಿರುತ್ತದೆ. ರೂ.2 ಲಕ್ಷ ಖರ್ಚಾದ ಬಗ್ಗೆ ಯಾವುದೆ ದಾಖಲೆ ಹಾಜರು ಪಡಿಸಿರುವುದಿಲ್ಲ.

5. ಅಪಘಾತಕ್ಕಿಂತ ಮೊದಲೆ ನನ್ನ ಗಂಡ ಬೇರೆ ಯಾವುದೋ ಕಾಯಿಲೆ ಯಿಂದ ಬಳಲುತ್ತಿದ್ದ ಎಂದರೆ ಸರಿಯಲ್ಲ. ನನ್ನ ಗಂಡ ಅಪಘಾತದಿಂದಾದ ಗಾಯದಿಂದ ತೀರಿಕೊಂಡಿರದೇ ಬೇರೆ ಕಾಯಿಲೆಯಿಂದ ತೀರಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಕಾರ್ ಚಾಲಕನಿಗೆ ಡ್ರೈವಿಂಗ್ ಲೈಸನ್ಸ ಇತ್ತೋ ಇಲ್ಲವೊ ಎಂದು ನನಗೆ ಗೊತ್ತಿರುವುದಿಲ್ಲ. ಯಾವುದೆ ಅಪಘಾತ ಆದರೂ 6 ತಿಂಗಳು ಮಾತ್ರ ಚಿಕಿತ್ಸೆ ಕೊಡುತ್ತಾರೆ 3 ವರ್ಷಗಳ ವರೆಗೆ ಯಾವುದೆ ಚಿಕಿತ್ಸೆ ಕೊಡುವುದಿಲ್ಲ ಎಂದರೆ ಸರಿಯಲ್ಲ. 12-02-2020 ರಿಂದ ದಿಃ 22-02-2024 ರವರೆಗೆ ನಿರಂತರವಾಗಿ ನನ್ನ ಗಂಡನಿಗೆ ಯಾವುದೆ ಚಿಕಿತ್ಸೆ ಕೊಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿರಂತರ ಚಿಕಿತ್ಸೆ ಕೊಡಿಸಿದ ಬಗ್ಗೆ ವೈದ್ಯರನ್ನು ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಎಂದರೆ ಸಾಕ್ಷಿ ವಿಚಾರಣೆ ಮಾಡಿಸುತ್ತೇನೆ ಎಂದು ಹೇಳುತ್ತಾರೆ. ನಿಪಿ-34 , 8 ಎಕ್ಸರೆ ಪಿಲ್ಮಗಳ ಜೊತೆಗೆ ರೇಡಿಯಾಲಜಿ ರಿಪೋರ್ಟ ಹಾಜರು ಪಡಿಸಿಲ್ಲ ಎಂದರೆ ಸರಿ. 360 ಔಷಧಿಯ ಬಿಲ್ ಗಳು ಹಾಗೂ 116 ಸಲಹಾ ಚೀಟಿಗಳನ್ನು ಖೊಟ್ಟಿ ಸೃಷ್ಠಿ

ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಚಿಕಿತ್ಸೆ ಪಡೆಯುತ್ತಿದ್ದಾಗ ಮೈಯಲ್ಲಿ ಹುಣ್ಣಾಗಿದ್ದು ಆ ಬಗ್ಗೆ ರೂ. 10 ಲಕ್ಷ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ರೂ.8 ಲಕ್ಷ ಬೇಕು ಎಂದು ಅರ್ಜಿಯಲ್ಲಿ ನಮೂದಿಸಿದ್ದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

6. ನನ್ನ ಮುಖ್ಯ ವಿಚಾರಣೆಯ 11 ಪ್ಯಾರಾದಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.ನನ್ನ ಗಂಡ ಅಪಘಾತದಲ್ಲಿ ಆದ ಗಾಯಗಳಿಂದ ಮರಣ ಹೊಂದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಬೇರೆ ಕಾರಣಗಳಿಂದ ಮರಣ ಹೊಂದಿದ್ದರೂ ಸಹ ಪೋಲಿಸರ ಜೊತೆ ಮಿಲಾಪೆಯಾಗಿ ಯು ಡಿ ಆರ್ ಕೇಸ್ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಡಿಸ್ಚಾರ್ಜ ಸಮರಿಗಳನ್ನು ಈ ಕೇಸ್ ಗೊಸ್ಕರ ಸೃಷ್ಠಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-26 ರಿಂದ 30 ಆಸ್ಪತ್ರೆಯ ಬಿಲ್ ಗಳನ್ನು ಸೃಷ್ಠಿ ಮಾಡಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. 360 ಔಷಧಿಯ ಬಿಲ್ ಗಳಲ್ಲಿ ಹಣ ಪಾವತಿಯ ಬಗ್ಗೆ ಯಾವುದೆ ರುಜು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-32 ಸಲಹಾ ಚೀಟಿಗಳಿಗೂ ಮತ್ತು ನಿಪಿ-31 ಔಷಧಿಯ ಬಿಲ್ ಗಳಿಗೂ ತುಂಬಾ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಹಾಜರು ಪಡಿಸಿರುವ ಎಲ್ಲಾ ದಾಖಲೆಗಳು ಸುಳ್ಳು ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. 8 ಎಕ್ಸ ರೆ ಪಿಲ್ಮಗಳು ಮತ್ತು 10 ಸ್ಕ್ಯಾನ್ ಪಿಲ್ಮಗಳು ನನ್ನ ಗಂಡನಿಗೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆದುಕೊಳ್ಳುವುದಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.